ಪದಬಂಧ



ಎಡದಿಂದ ಬಲಕ್ಕೆ:

1. ಅಂಥ ಪರದೆಯನ್ನು ಹರಿದದ್ದು ಶಿಕ್ಷಾರ್ಹ ತಪ್ಪು ಬಿಡಿ (4)
3. ಆಹಾರಕ್ಕೆಂದು ಸುಂದರ ಹಂಸಗಳ ಕೊಲೆ! (3)
4. ಮಾತೆಯ ಮನದ ತುಂಬ ಎಂಥ ವಾತ್ಸಲ್ಯ! (3)
6. ಹೊಸದೇನಿಲ್ಲ. ಅದೇ ಮಧುರ ಕಂಠ (4)
7. ವ್ಯಾಪಾರವನ್ನೇ ಹೊಯ್ದಾಡಿಸುವಂತೆ ಬೀಸಿದ ಗಾಳಿ (3)
9. ಮೂರ್ಖರ ಸಹವಾಸ ಬಹಳ ಅಪಾಯಕರ (3)
11. ತಾಸಿನೊಳಗೇ ತಯಾರಾಯಿತು ನೋಡಿ ತಿಂಡಿ (3)
13. ಹರಿವಾಣದಲ್ಲಿದ್ದದ್ದೆಲ್ಲ ಕಳುವಾಗಿ ಹೋಯಿತೇ? (3)
15. ಈ ವ್ಯಥೆಯನ್ನು ನಿವಾರಿಸಲು ಗರುಡನೇ ಸರಿ (4)
17. ಭಾರೀ ಬಲ ಬಳಸುವಷ್ಟು ಕಷ್ಟ ಏನಿಲ್ಲ (3)
18. ವರ್ತನೆಯನ್ನು ಬದಲಿಸಬೇಕೆಂದು ತೀವ್ರ ಒತ್ತಾಯ (3)
19. ಹೀಗೆ ಸದಾ ವಿರಮಿಸುವವನ ಆದಾಯ ಹೇಗೆ? (4)

ಮೇಲಿಂದ ಕೆಳಕ್ಕೆ:

1. ಆಸರೆ ನೀಡಿದವಳು ಆಳರಸನ ಸತಿ ತಾನೇ? (3)
2. ಧೂಮಪಾನದಿಂದ ಹಾಳಾದೀತು ರಕ್ತನಾಳ (3)
3. ಬಸವನ ಮೆರವಣಿಗೆಯ ಸಾಧ್ಯತೆ ಉಂಟೇ? (3)
5. ತಪ್ಪೆಸಗಿದವರಲ್ಲಿ ಒಬ್ಬ ಪೆದ್ದನೂ ಇದ್ದಾನೆ (3)
7. ಪಶು ಪಶುವನ್ನೂ ರಕ್ಷಿಸುವ ಒಡೆಯ ಈಶ್ವರನೇ ತಾನೇ? (4)
8. ಗಿಡುಗನನ್ನು ಹಾರಿಸು; ಹೆದರುವಂತೆ ಮಾಡು (4)
9. ಮಹಾಮಹಿಮ ತಾತ, ಅಮ್ಮನ ತಂದೆ (4)
10. ಕವಡೆ ಮಾರಿ ಹಣ ಗಳಿಕೆಗೆ ನಿಯಂತ್ರಣ (4)
12. ಮುನಿಸನ್ನು ಇಳಿಸಲು ಮೊದಲು ವಂದಿಸು (3)
14. ಹತ್ತಿರದ ಜನ ಯಾರೂ ಇಲ್ಲದಂತಿದ್ದಾನೆ (3)
15. ವಿಷ್ಣುವನ್ನು ಆರಾಧಿಸುವವ ಈತನಾದರೆ ಹೇಗೆ? (3)
16. ವ್ಯಾಯಾಮವನ್ನ ಕಲಿಸಿದ ಅನ್ಯದೇಶೀಯ ಗೊತ್ತೇ? (3)

### 24-7-14ರ ಉತ್ತರಗಳು

ಎಡದಿಂದ ಬಲಕ್ಕೆ

1. ಸ್ವಾಭಾವಿಕ; 3. ನವಮಿ; 4. ರಜಕ; 6. ತ್ವರೆ ಮಾಡು; 7. ಕರಬೂಜ; 9. ಅಜಗಜ; 11. ತಳಪಾಯ; 13. ಧನುಷ್ಕೋಟಿ; 15. ಕಾರಕೂನ; 17. ಯತನ (=ಯತ್ನ); 18. ರಹಕು (ಕುಹರ ಹಿಂದು ಮುಂದು); 19. ನರಲೋಕ

ಮೇಲಿನಿಂದ ಕೆಳಕ್ಕೆ

1. ಸ್ವಾಮಿತ್ವ; 2. ಕರಡು; 3. ನಸೀಬು; 5. ಕಣಜ; 7. ಕಲುಷಿತ; 8. ಜಲಾಶಯ; 9. ಅನುಬಂಧ; 10. ಜಟಾಪಟಿ; 12. ಪಾನೀಯ; 14. ನುರುಕು; 15. ಕಾನನ; 16. ನರಕ

## ಪ್ರಶ್ನಾಂಕಣ

# ಏನಿದು ದಿ ಗ್ರೇಟ್ ಬ್ಯಾರಿಯರ್ ರೀಫ್?

ಅದು ವಿಶ್ವವಿಖ್ಯಾತವಾದ ಒಂದು ಹವಳ ಸಾಮ್ರಾಜ್ಯ. ಆಸ್ಟ್ರೇಲಿಯಾ ಖಂಡದ ಈಶಾನ್ಯ ಭಾಗದ ಕಡಲಂಚಿನ ಉದ್ದಕ್ಕೂ ತಡೆಗೋಡೆಯಂತೆ, ಮಹಾನ್ ಕೋಟೆಯಂತೆ ಹಬ್ಬಿರುವ ಈ ನಿಸರ್ಗ ನಿರ್ಮಿತಿಯ ವಿಕ್ರಮಗಳು ವಿಸ್ಮಯಗಳು ಹೇರಳ, ಅಸದಳ. ಎಷ್ಟೆಂದರೆ ಸಾಗರಾವಾರದ ಸಪ್ತ ವಿಸ್ಮಯಗಳಲ್ಲಿ ಈ ಸೃಷ್ಟಿಗೇ ಪ್ರಥಮ ಸ್ಥಾನ. ಜೀವಿ ನಿರ್ಮಿತವಾದ ಅತ್ಯಂತ ಬೃಹತ್ ಕಟ್ಟಡ ಕೂಡ ಇದೇ. ವಿಶ್ವ ಪರಂಪರೆಯ ಅಗ್ರಮಾನ್ಯ ತಾಣಗಳಲ್ಲೂ ಇದಕ್ಕೇ ಪರಮ ಮೇರು ಸ್ಥಾನ. ಕ್ಷುಲ್ಲಕ ಹವಳದ ಜೀವಿಗಳು ಕಳೆದ ಹತ್ತು ಸಾವಿರ ವರ್ಷಗಳಿಂದ ನಿರಂತರ ನಿರ್ಮಿಸುತ್ತ ಬಂದಿರುವ ಈ ಅನುಪಮ ಜಲಾಂತರ್ಗತ ನಿರ್ಮಿತಿಯ ಮಹದದ್ಭುತದ ಪ್ರಮುಖ ಅಂಶಗಳನ್ನು ಗಮನಿಸಿ:

ದಿ ಗ್ರೇಟ್ ಬ್ಯಾರಿಯರ್ ರೀಫ್‌ನ ಉದ್ದ 2300 ಕಿ.ಮೀ.! ಅಗಲ 25 ರಿಂದ 130 ಕಿ.ಮೀ. ಕಡಲಲ್ಲಿ 35 ಮೀಟರ್ ಆಳದಿಂದ ಬೆಳೆದು ಹಬ್ಬಿ ನಿಂತಿರುವ ಈ ಹವಳ ಗೋಡೆಯ (ಚಿತ್ರ-1) ಒಟ್ಟು ವಿಸ್ತಾರ 35 ಸಾವಿರ ಚದರ ಕಿ.ಮೀ.!

ಈ ಹವಳ ಲೋಕದಲ್ಲಿ 2900 ಪ್ರತ್ಯೇಕ ದಿಬ್ಬಗಳಿವೆ; 900 ಹವಳ ದ್ವೀಪಗಳಿವೆ. ಈ ಹವಳ ರಾಜ್ಯದಲ್ಲಿ 350ಕ್ಕೂ ಅಧಿಕ ಪ್ರಭೇದಗಳ, ಕೋಟ್ಯಂತರ ಸಂಖ್ಯೆಯ ಹವಳದ ಜೀವಿಗಳು ನೆಲೆಗೊಂಡಿವೆ. ಇದೇ ಕೋಟೆಯನ್ನು ವಿಸ್ತರಿಸುತ್ತಿವೆ.

ವಿಪುಲ, ವೈವಿಧ್ಯಮಯ ಜೀವಾವಾರವಾಗಿಯೂ 'ದಿ ಗ್ರೇಟ್ ಬ್ಯಾರಿಯರ್ ರೀಫ್' ಅದ್ವಿತೀಯ ದಾಖಲೆಯನ್ನು ಸ್ಥಾಪಿಸಿದೆ. ಸಾಗರ ವಿಜ್ಞಾನಿಗಳ ಇತ್ತೀಚಿನ ಸರ್ವೇಕ್ಷಣೆಗಳ ಪ್ರಕಾರ ಹದಿನೇಳು ಸಾವಿರಕ್ಕೂ ಅಧಿಕ ಸಸ್ಯ-ಪ್ರಾಣಿ ಪ್ರಭೇದಗಳು ಅಲ್ಲಿ ದಟ್ಟವಾಗಿ ನೆಲೆಗೊಂಡಿವೆ. 130 ಶಾರ್ಕ್ ಪ್ರಭೇದಗಳೂ ಸೇರಿ 1800 ಮತ್ಸ್ಯ ಪ್ರಭೇದಗಳು, 8000 ಮೃದ್ವಂಗಿ ಪ್ರಭೇದಗಳು, ಕಂಟಕ ಚರ್ಮಿಗಳ 600 ಪ್ರಭೇದಗಳು, ತಿಮಿಂಗಿಲಗಳ ಮತ್ತು ಡಾಲ್ಫಿನ್‌ಗಳ 30




ಪ್ರಭೇದಗಳು, 215 ಹಕ್ಕಿ ಪ್ರಭೇದಗಳು ಮತ್ತು ಶೈವಲಗಳ 500 ಪ್ರಭೇದಗಳು 'ದಿ ರೀಫ್'ನಲ್ಲೇ ವಿಶೇಷವಾಗಿ ವಾಸ್ತವ್ಯ ಪಡೆದಿವೆ. ಹಾಗಾಗಿ ಅತ್ಯಂತ ನಿಬಿಡ ವರ್ಣಮಯ ವೈವಿಧ್ಯಮಯ ಬೆರಗು ತುಂಬಿದ ಜೀವಲೋಕವಾಗಿ ಕೂಡ (ಚಿತ್ರ-2). ದಿ ಗ್ರೇಟ್ ಬ್ಯಾರಿಯರ್ ರೀಫ್ ವಿಶ್ವ ಪ್ರಸಿದ್ಧವಾಗಿದೆ.

ಇವೆಲ್ಲ ಕಾರಣಗಳಿಂದಾಗಿಯೇ ದಿ ಗ್ರೇಟ್ ಬ್ಯಾರಿಯರ್ ರೀಫ್‌ನ ಮೂರರ ಒಂದಂಶದಷ್ಟು ಅತ್ಯಂತ ಪ್ರಶಸ್ತ ಪ್ರದೇಶವನ್ನು ಆಸ್ಟ್ರೇಲಿಯಾ ಸರಕಾರ ಅಮೂಲ್ಯ ಸಾಗರೋದ್ಯಾನವೆಂದು ಗುರುತಿಸಿ ಸಂರಕ್ಷಿಸಿಟ್ಟಿದೆ. ಈ ಪರಮ ವೈಭವದ ನೈಸರ್ಗಿಕ ನೆಲೆಯನ್ನು ನೇರ ವೀಕ್ಷಿಸಲು ಹೋಗುತ್ತಿರುವ ಪ್ರವಾಸಿಗರ ಸಂಖ್ಯೆ ವಾರ್ಷಿಕ ಒಂದು ದಶಲಕ್ಷ ಮೀರಿದೆ!

■ ಎನ್. ವಾಸುದೇವ್